**3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ರಾಮನಗರ**

**ಸತ್ರ ಪ್ರಕರಣ ಸಂಖ್ಯೆ 19/2023**

ಪಿರ್ಯಾದಿ : ರಾಮನಗರ ಗ್ರಾಮಾಂತರ ಆರಕ್ಷಕ ಠಾಣೆ,
ರಾಜ್ಯದ ಪರವಾಗಿ

Vs.

ಆರೋಪಿಗಳು:
1. ಲಿಂಗರಾಜು. ಜಿ
2. ರವಿ
3. ದರ್ಶನ್( ಕಾನೂನುನೊಂದಿಗೆ ಸಂಘರ್ಷಕ್ಕೊಳಗಾದ ಬಾಲಕ)

**ದೋಷಾರೋಪಣೆ**

I, ರಾಘವೇಂದ್ರ ಜಿ., ಬಿ.ಎಸ್.ಸಿ., ಎಲ್.ಎಲ್.ಬಿ., 3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ರಾಮನಗರ, ಈ ಮೂಲಕ ನಿಮ್ಮನ್ನು ಈ ಕೆಳಗೆ ಹೇಳಿದಂತೆ ದೋಷಾರೋಪಣೆಗೆ ಗುರಿಪಡಿಸುತ್ತಿದ್ದೇನೆ.

ಆರೋಪಿಗಳು:

1. ಲಿಂಗರಾಜು ಜಿ,
ಬಿನ್ ಗುರುಮೂರ್ತಿ,
ವಯಸ್ಸು 19 ವರ್ಷ,
ವಾಸಃ ಅಚ್ಚಲು ಕಾಲೋನಿ,
ಕೈಲಾಂಚ ಹೋಬಳಿ,
ರಾಮನಗರ ತಾಲ್ಲೂಕು ಮತ್ತು ಜಿಲ್ಲೆ,
ರಾಮನಗರ.

3. ರವಿ,
ಬಿನ್ ಚಿಕ್ಕವೀರಯ್ಯ,
ವಯಸ್ಸು 21 ವರ್ಷ,
ವಾಸಃ ಅಚ್ಚಲು ಕಾಲೋನಿ,
ಕೈಲಾಂಚ ಹೋಬಳಿ,
ರಾಮನಗರ ತಾಲ್ಲೂಕು ಮತ್ತು ಜಿಲ್ಲೆ,
ರಾಮನಗರ.

ದಿನಾಂಕಃ 08.09.2022 ರ ಸಂಜೆ 4.45 ರ ಸಮಯದಲ್ಲಿ ರಾಮನಗರ ಗ್ರಾಮಾಂತರ ಆರಕ್ಷಕ ಠಾಣೆ ಮಿತಿಗೆ ಸೇರಿದ ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಕೈಲಾಂಚ ಹೋಬಳಿ, ಅಚ್ಚಲು ಕಾಲೋನಿಯಲ್ಲಿರುವ ಸೇನಾಪತಿ ವೈಟ್ಲೆ ಪ್ಯಾಕ್ಟರಿಯ ಹಿಂಭಾಗದಲ್ಲಿರುವ ಅರ್ಕಾವತಿ ನದಿ ದಂಡೆಯಲ್ಲಿರುವ ಅಚ್ಚಲು ಸೇನಾಪತಿ ವೈಟ್ಲೆ ಪ್ಯಾಕ್ಟರಿಗೆ ಸೇರಿದ ಖಾಲಿ ಜಾಗದಲ್ಲಿ ನೀವು ಅರೋಪಿ-1 ಮತ್ತು 2 ರವರು 3 ನೇ ಕಾನೂನುನೊಂದಿಗೆ ಸಂಘರ್ಷಕ್ಕೊಳಗಾದ ಬಾಲಕ ಇವರ ಜೊತೆ ಸೇರಿ ಪ್ಯಾಕ್ಟರಿಗೆ ಸೇರಿದ ಖಾಲಿ ಜಾಗದಲ್ಲಿ ಮೇಯಲು ಬಿಟ್ಟಿದ್ದ ಹಸುಗಳನ್ನು ಮನೆಗೆ ಹೊಡೆದುಕೊಂಡು ಹೋಗಲು ಬಂದ ಕೆಂಪಮ್ಮನನ್ನು ಕೊಲೆ ಮಾಡಿ ಅವರ ಮೈಮೇಲಿದ್ದ ಚಿನ್ನದ ಒಡವೆಗಳನ್ನು ದೋಚುವ ಸಮಾನ ಉದ್ದೇಶದ ಮುಂದುವರಿಕೆಯಾಗಿ, ಕೆಂಪಮ್ಮ ರವರನ್ನು ನೀವು ಆರೋಪಿ-1 ಹಿಂದಿನಿಂದ ತಳ್ಳಿ ಮುಖ ಅಡಿಯಾಗಿ ಕೆಳಕ್ಕೆ ಬೀಳಿಸಿ ಎರಡು ಕೈಗಳನ್ನು ಹಿಂದಕ್ಕೆ ಎಳೆದು ಹಿಡಿದುಕೊಂಡಿದ್ದು, ಕಾನೂನುನೊಂದಿಗೆ ಸಂಘರ್ಷಕ್ಕೊಳಗಾದ ಬಾಲಕ ಕೆಂಪಮ್ಮರವರ ಬಾಯಿಯನ್ನು ಬಿಗಿಯಾಗಿ ಒತ್ತಿ ಹಿಡಿದಿದ್ದು, ನೀವು ಆರೋಪಿ-2 ಅಲ್ಲಿಯೇ ಕಸದಲ್ಲಿ ಬಿದ್ದಿದ್ದ ಬಿಳಿಯ ಬಣ್ಣದ ಪ್ಲಾಸ್ಟಿಕ್ ಚೀಲದ ಹಗ್ಗವನ್ನು ತಂದಿದ್ದು ಕಾನೂನುನೊಂದಿಗೆ ಸಂಘರ್ಷಕ್ಕೊಳಗಾದ ಬಾಲಕ ಕೆಂಪಮ್ಮನ ಎರಡು ಕೈಗಳನ್ನು ಹಿಂದಕ್ಕೆ ಹಿಡಿದು ಎಳೆದು ಹಿಡಿದುಕೊಂಡಿದ್ದು, ನೀವು ಆರೋಪಿ-1 ಮತ್ತು 2 ರವರು ಪ್ಲಾಸ್ಟಿಕ್ ಚೀಲದ ಹಗ್ಗವನ್ನು ಕೆಂಪಮ್ಮನ ಕುತ್ತಿಗೆಗೆ ಹಾಕಿ ಸುಮಾರು 10 ನಿಮಿಷಗಳ ಕಲಾ ಬಿಗಿಯಾಗಿ ಎಳೆದು ಕೊಲೆ ಮಾಡಿದ್ದು ಈ ಮೂಲಕ ಭಾರತ ದಂಡ ಸಂಹಿತೆ ಕಲಂ 302 ಜೊತೆಗೆ 34 ರಡಿ ಅಪರಾಧ ನನ್ನ ಸಂಜ್ಞೇಯತೆಯಲ್ಲಿ ಎಸಗಿರುತ್ತೀರ,

ಎರಡನೇಯದಾಗಿ, ಮೇಲೆ ಹೇಳಿದಂತೆ ಕೊಲೆ ಮಾಡಿದ ನಂತರ ನೀವು ಆರೋಪಿ-1, 2 ಮತ್ತು ಕಾನೂನುನೊಂದಿಗೆ ಸಂಘರ್ಷಕ್ಕೊಳಗಾದ ಬಾಲಕ ನಿಮ್ಮ ಸಮಾನ ಉದ್ದೇಶದ ಮುಂದುವರಿಕೆಯಾಗಿ ಮೃತ ಕೆಂಪಮ್ಮನ ದೇಹವನ್ನು ಸುಮಾರು 15 ಅಡಿ ದೂರ ಗಿಡಗಳಿಂದ್ದ ಜಾಗಕ್ಕೆ ಎಳೆದು ಕೊಂಡು ಹೋಗಿ ಅಲ್ಲಿ ಮೃತಳ ಕಿವಿಯಲ್ಲಿದ್ದ ಚಿನ್ನದ ಓಲೆ, ಸುತ್ತು ಮಾಟಿ, ಕತ್ತಿನಲ್ಲಿನ ಕರಿಮಣಿ ಸರದಲ್ಲಿದ್ದ ಒಂದು ಚಿನ್ನದ ತಾಳಿ, ಒಂದು ಲಕ್ಷ್ಮೀ ಕಾಸು ಮತ್ತು ಜಿಯೋ ಕಿಪ್ಯಾಡ್ ಫೋನ್ ತೆಗೆದುಕೊಂಡು ಸಾಕ್ಷ್ಯ ಮರೆ ಮಾಚುವ ಉದ್ದೇಶದಿಂದ ಅಲ್ಲಿಯೇ ಕಸದಲ್ಲಿ ಬಿದ್ದಿದ್ದ ಬಿಳಿಯ ಬಣ್ಣದ ಪ್ಲಾಸ್ಟಿಕ್ ಚೀಲ ನೀವು ಆರೋಪಿ-1 ತಂದು ಹಿಡಿದುಕೊಂಡಿದ್ದು, ನೀವು ಅರೋಪಿ-2 ಮತ್ತು ಕಾನೂನುನೊಂದಿಗೆ ಸಂಘರ್ಷಕ್ಕೊಳಗಾದ ಬಾಲಕ ಮೃತ ದೇಹವನ್ನು ಪ್ಲಾಸ್ಟಿಕ್ ಚೀಲದೊಳಗೆ ಹಾಕಿ

ಅಲ್ಲಿಯೇ ಬಿದ್ದಿದ್ದ ಚಪ್ಪಟೆ ಆಕಾರದ ಪ್ಲಾಸ್ಟಿಕ್ ವೈರ್ ನಿಂದ ಚೀಲದ ಬಾಯಿ ಕಟ್ಟಿ ನೀವು ಆರೋಪಿ-1, 2 ಮತ್ತು ಕಾನೂನುನೊಂದಿಗೆ ಸಂಘರ್ಷಕ್ಕೊಳಗಾದ ಬಾಲಕ ಸದರಿ ಪ್ಲಾಸ್ಟಿಕ್ ಚೀಲದ ಮೂಟೆಯನ್ನು ತೆಗೆದುಕೊಂಡು ಹೋಗಿ ಅರ್ಕಾವತಿ ನದಿಯ ದಡದಲ್ಲಿ ಬಿಸಾಡಿದ್ದು, ಈ ಮೂಲಕ ಭಾರತ ದಂಡ ಸಂಹಿತೆ ಕಲಂ 201 ಮತ್ತು ಜೊತೆಗೆ 34 ರಡಿ ಅಪರಾಧ ನನ್ನ ಸಂಜ್ಞೇಯತೆಯಲ್ಲಿ ಎಸಗಿರುತ್ತೀರ,

ನಾನು ನಿಮ್ಮನ್ನು ಮೇಲೆ ಹೇಳಿದ ದೋಷಾರೋಪಣೆಗೆ ವಿಚಾರಣೆ ಆಗತಕ್ಕದ್ದು ಎಂದು ನಿರ್ದೇಶಿಸುತ್ತೇನೆ.

ದಿನಾಂಕ: 01.07.2024.

**(ಶ್ರೀ.ರಾಘವೇಂದ್ರ ಜಿ.)**
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ

**3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ರಾಮನಗರ**

ಸತ್ರ ಪ್ರಕರಣ ಸಂಖ್ಯೆ **19/2023**

ಪಿರ್ಯಾದಿ : ರಾಮನಗರ ಗ್ರಾಮಾಂತರ ಆರಕ್ಷಕ ಠಾಣೆ,
ರಾಜ್ಯದ ಪರವಾಗಿ

Vs.

ಆರೋಪಿಗಳು: 1. ಲಿಂಗರಾಜು. ಜಿ

**ದೋಷಾರೋಪಣೆ**

ಪ್ರಶ್ನೆ.1: ಈಗ ಓದಿ ಹೇಳಿ ವಿವರಿಸಿದ ದೋಷಾರೋಪಣೆ ನಿಮಗೆ ಅರ್ಥ ಆಗಿರುತ್ತದೆಯೇ?

ಉತ್ತರಃ

ಪ್ರಶ್ನೆ.2: ನೀವು ತಪ್ಪು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆ ಆಗಬೇಕೇ?

ಉತ್ತರಃ

( ಆರೋಪಿಯನ್ನು ಮೇಲೆ ಹೇಳಿದಂತೆ ನನ್ನ ಸಮ್ಮುಖದಲ್ಲಿ ಪ್ರಶ್ನೆ ಮಾಡಿದ್ದು ಅವರು ಕೊಟ್ಟ ಉತ್ತರವನ್ನು ಅವರು ಕೊಟ್ಟಂತ್ತೆಯೇ ತೆಗೆದುಕೊಂಡಿರುತ್ತದೆ ಎಂದು ಈ ಪ್ರಮಾಣ ಪತ್ರ).

ದಿನಾಂಕ: 01.07.2024.

**(ಶ್ರೀ.ರಾಘವೇಂದ್ರ ಜಿ.)**
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ

**<u>3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ರಾಮನಗರ</u>**

<u>ಸತ್ರ ಪ್ರಕರಣ ಸಂಖ್ಯೆ **19/2023**</u>

ಪಿರ್ಯಾದಿ : ರಾಮನಗರ ಗ್ರಾಮಾಂತರ ಆರಕ್ಷಕ ಠಾಣೆ,
ರಾಜ್ಯದ ಪರವಾಗಿ

Vs.

ಆರೋಪಿಗಳು: 2. ರವಿ

**<u>ದೋಷಾರೋಪಣೆ</u>**

ಪ್ರಶ್ನೆ.1: ಈಗ ಓದಿ ಹೇಳಿ ವಿವರಿಸಿದ ದೋಷಾರೋಪಣೆ ನಿಮಗೆ ಅರ್ಥ ಆಗಿರುತ್ತದೆಯೇ?

ಉತ್ತರಃ

ಪ್ರಶ್ನೆ.2: ನೀವು ತಪ್ಪು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆ ಆಗಬೇಕೇ?

ಉತ್ತರಃ

( ಆರೋಪಿಯನ್ನು ಮೇಲೆ ಹೇಳಿದಂತೆ ನನ್ನ ಸಮ್ಮುಖದಲ್ಲಿ ಪ್ರಶ್ನೆ ಮಾಡಿದ್ದು ಅವರು ಕೊಟ್ಟ ಉತ್ತರವನ್ನು ಅವರು ಕೊಟ್ಟಂತ್ತೆಯೇ ತೆಗೆದುಕೊಂಡಿರುತ್ತದೆ ಎಂದು ಈ ಪ್ರಮಾಣ ಪತ್ರ).

ದಿನಾಂಕ: 01.07.2024.

**(ಶ್ರೀ.ರಾಘವೇಂದ್ರ ಜಿ.)**
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ